ಆಕ್ಟಿನಲ್ಲಿ ಈಗಾಗಲೇ ಇದೆ. ಮತ್ತೆ ರೂಲ್ ೨೬ರಲ್ಲಿ ಇದನ್ನು ಬದಲಾವಣೆ ಮಾಡಲಿಕ್ಕೆ ಅವಕಾಶವಿಲ್ಲ. ಇದು ಒಂದು ದಿವಸದ ಪ್ರಶ್ನೆಯಲ್ಲ ಇನ್ನು ಮುಂದೆ ಕೂಡ ಇಂಥ ಪರಿಸ್ಥಿತಿ ಬಂದರೆ ಮುನಿಸಿಪಾಲಿಟಿ ಆಕ್ಟಿನಲ್ಲಿ ಯಾವ ರೀತಿ ಪ್ರೊವಿಜನ್ ಮಾಡಿದ್ದೇವೆ, ಸದಾಕಾಲ ಇಂತಹ ಪರಿಸ್ಥಿತಿಯನ್ನು ನಾವು ಎದುರಿಸಲಿಕ್ಕೆ ಒಂದು ಅವಕಾಶ ಇರಬೇಕು. ಈಗಾಗಲೇ ನಾವು ಚುನಾವಣೆ ೨೯ನೇ ತಾರೀಖು ಎಂದು ನಿರ್ಣಯಿಸಿರುವುದರಿಂದ ಈ ಕಾನೂನಿನ ಬಲದಿಂದ ನಾವು ಬೇಕಾದ ಹಾಗೆ ಮುಂದುವರಿಸುತ್ತೇವೆಂಬ ಒಂದು ದೂರು, ಶಂಕೆ ಈ ಸದನಕ್ಕಾಗಲೀ ಸನ್ಮಾನ್ಯ ಸದಸ್ಯರಿಗಾಗಲೀ ಬರಬೇಕಾದಂಥ ಅವಶ್ಯಕತೆ ಇಲ್ಲ. ಆದ್ದರಿಂದ ಇಂಥ ಕಾನೂನಿನ ಪ್ರಕ್ರಿಯೆಗಳಿಗೆ ಸರ್ಕಾರ ಮೊರೆ ಹೋಗಿದೆಯೇ ಹೊರತು ಏನೋ ಹೊಸದಾಗಿ ಪ್ರಜಾಪ್ರಭುತ್ವದ ಸದ್ಭಾವನೆಗಳಿಗೆ ಒಂದು ಆತಂಕ, ಬಾಧಕ ತರತಕ್ಕಂಥ ವ್ಯವಸ್ಥೆಗೆ ಹೋಗಲಿಲ್ಲ. ಆದ್ದರಿಂದ ಪ್ರಾಮಾಣಿಕವಾಗಿ ಸದ್ಭಾವನೆಯಿಂದ ಮಾಡಿದಂಥ ಈ ನಿರ್ಣಯವನ್ನು ಮತ್ತು ಈ ಮಸೂದೆಯನ್ನು ಎಲ್ಲ ಸದಸ್ಯರೂ ಒಮ್ಮತದಿಂದ ಮಂಜೂರು ಮಾಡಿಕೊಡಲಿಕ್ಕೆ ಅವಕಾಶ ಕೊಡಬೇಕೆಂದು ತಮ್ಮ ಮುಖೇನ ನಾನು ಮಾನ್ಯ ಸದಸ್ಯರನ್ನು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಮಗೆ ಕಾನೂನು ಸಚಿವರ ವಿವರಣೆ ಸಮಾಧಾನವನ್ನಂತೂ ತಂದಿಲ್ಲ. ಸಮಾಧಾನ ತರುವಷ್ಟು ರೀತಿಯಲ್ಲಿ ಅವರು ಮಾಡಿಲ್ಲ ಎಂದಲ್ಲ, ವಸ್ತು ಸ್ಥಿತಿಯೇ ಹಾಗೆ ಇದೆ. ಈ ಶಾಸನವೇ ಒಂದು ರೀತಿಯಾದ ವಿಕೃತ ಹಾಗೂ ಕರಾಳವಾದ ಶಾಸನ. ಆದ್ದರಿಂದ ನಾವಂತೂ ಈ ಶಾಸನಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ನಮಗೆ ಇದಕ್ಕಿಂತ ಬೇರೆ ಮಾರ್ಗವಿಲ್ಲ. ಇಂತಹ ಶಾಸನಗಳನ್ನು ಇಲ್ಲಿ ಕುಳಿತು ವಿರೋಧ ಮಾಡುವುದಕ್ಕಿಂತಲೂ ಹೊರಗೆ ಹೋಗುವುದೇ ಶ್ರೇಷ್ಠವೆಂದು ತಿಳಿದು ನಾವು ಹೊರಗೆ ಹೋಗುತ್ತಿದ್ದೇವೆ.

(ಮಾನ್ಯ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಗ್ರೇಟರ್ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಉಪಾಧ್ಯಕ್ಷರು.—''ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :—

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಎದ್ದು ನಿಂತು ಮಾತನಾಡುತ್ತಿದ್ದರು. ಗೊಂದಲಮಯ ವಾತಾವರಣ ಉಂಟಾಗಿತ್ತು.)